ವಿಮಾನ ಚಲಿಸುತ್ತಿದ್ದನು. ಕೆಲವರು ಕಿಟಕಿಗಳಿಂದ ಕ್ಯಾಮೆರಾದಲ್ಲಿ ಫೋಟೋಗಳನ್ನು ಹಿಡಿದುಕೊಳ್ಳುತ್ತಿದ್ದರು. ನಾವು ಒಂದು ಹಳೆ ಕ್ಯಾಮೆರಾ ತಂದಿದ್ದರೂ ಅದನ್ನು ಬ್ಯಾಗ್‌ನಲ್ಲಿ ಇಟ್ಟಿದ್ದೆವು. ಹಿಂದಕ್ಕೆ ಬರುವಾಗ ಫೋಟೋಗಳನ್ನು ಹಿಡಿದುಕೊಳ್ಳೋಣ ಎಂದು ಸುಮ್ಮನಾದೆವು. ಹವಳದ ದಿಬ್ಬಗಳು ಇಷ್ಟು ಸೊಗಸಾಗಿ ಕಾಣಿಸುತ್ತವೆ ಎಂಬ ವಿಷಯ ನಮಗೆ ತಿಳಿದಿರಲಿಲ್ಲ. ಭೂಮಿಯ ಮೇಲೆ ಏನೆಲ್ಲ ವಿಸ್ಮಯಗಳಿವೆ ಎಂದುಕೊಂಡೆ. ಈ ಹವಳದ ದಿಬ್ಬಗಳು ಈ ಸಣ್ಣಸಣ್ಣ ದ್ವೀಪಗಳನ್ನು ಸುನಾಮಿ, ಚಂಡಮಾರುತ, ಬಿರುಗಾಳಿಗಳಿಂದ ರಕ್ಷಿಸುತ್ತವೆ ಎಂಬುದನ್ನು ವೈಜ್ಞಾನಿಕ ಲೇಖನಗಳಲ್ಲಿ ಓದಿದ್ದೇನೆ.

***

### ಪೋರ್ಟ್‌ಬ್ಲೇರ್‌ನ ವಿಹಂಗಮ ನೋಟ

ವಿಮಾನ ಇಳಿಯುತ್ತಿದ್ದಂತೆ ಗಗನಸಖಿಯರು **`Welcome to port Blair airport. Have a nice stay in Andaman and Nicobar Islands'** ಎಂದರು. ನಾವು ಕೈಚೀಲಗಳನ್ನು ತೆಗೆದುಕೊಂಡು ವಿಮಾನದಿಂದ ಹೊರಗೆ ಬಂದಿದ್ದೇ ವಿಮಾನ ನಿಲ್ದಾಣ ಒಂದು ದೊಡ್ಡ ಮನೆಯಂತೆ ಕಾಣಿಸುತ್ತಿತ್ತು. ಅನಂತರ ಲಗೇಜ್‌ಗಳನ್ನು ತೆಗೆದುಕೊಂಡು ಬೆಂಗಳೂರಿನ ಏಜೆನ್ಸಿ ಮೂಲಕ ಬಂದಿದ್ದ ಹನ್ನೆರಡು ಜನರು ಒಟ್ಟಾಗಿ ಹೊರಗಡೆ ಬಂದೆವು. ಅಲ್ಲಿ ಒಬ್ಬರು ಪ್ಲೇಕಾರ್ಡ್ ಮೇಲೆ ನಮ್ಮ ಟ್ರಾವೆಲ್ ಏಜೆನ್ಸಿ ಹೆಸರು ಬರೆದುಕೊಂಡು ನಿಂತಿದ್ದರು.

ಹೋಟೆಲಿನಲ್ಲಿ ಊಟ ಮಾಡಿ ಸ್ವಲ್ಪ ವಿಶ್ರಾಂತಿ ಪಡೆದುಕೊಂಡ ಮೇಲೆ ಹನ್ನೆರಡು ಜನರನ್ನು ವಾಹನದಲ್ಲಿ ಪೋರ್ಟ್ ಬ್ಲೇರ್ ತೋರಿಸಲು ಕರೆದುಕೊಂಡು ಹೊರಟರು. ಅಂಕು ಡೊಂಕು ರಸ್ತೆಗಳಲ್ಲಿ ವಾಹನ ಚಲಿಸುತ್ತಿದ್ದಂತೆ 'ಇಲ್ಲಿ ಪೋರ್ಟ್ ಬ್ಲೇರ್‌ನಲ್ಲಿ ಸೂರ್ಯಾಸ್ತ ಬೇಗನೆ ಆಗುವುದರಿಂದ ನಾವೆಲ್ಲ ಬೇಗನೆ ಹಿಂದಕ್ಕೆ ಬರಬೇಕಾಗುತ್ತದೆ. ಈ ದಿನ ಮೊದಲು ರೋಸ್ ಐಲ್ಯಾಂಡ್, ಅನಂತರ ಫಾರೆಸ್ಟ್ ಮ್ಯೂಸಿಯಂ ಕೊನೆಗೆ ಸೆಲ್ಯುಲಾರ್ ಜೈಲ್ ನೋಡೋಣ. ಉಳಿದ ಸ್ಥಳಗಳನ್ನು ಆಗಾಗ ಸಮಯ ಸಿಕ್ಕಾಗೆಲ್ಲ ಒಂದೊಂದಾಗಿ ನೋಡೋಣ' ಎಂದರು. ಮೊದಲಿಗೆ ಸಣ್ಣ ಹಡಗಿನಲ್ಲಿ ನಾವೆಲ್ಲ ರೋಸ್ ಐಲ್ಯಾಂಡ್‌ಗೆ ಹೋದೆವು. ಸುತ್ತಲೂ ಸಮುದ್ರ. ಮಧ್ಯೆ ದ್ವೀಪ. ದ್ವೀಪದಲ್ಲಿ ಶಿಥಿಲಗೊಂಡಿರುವ ಸಣ್ಣ ಅರಮನೆಗಳಂತಹ ಬಂಗಲೆಗಳು. ವಿಶೇಷವೆಂದರೆ ಶಿಥಿಲಗೊಂಡ ಆ ಮನೆಗಳ ಗೋಡೆಗಳನ್ನೇ ಮರಗಳು ಅರಳಿ ಕಟ್ಟೆಗಳಂತೆ ಮಾಡಿಕೊಂಡು ಬೆಳೆದು ನಿಂತಿದ್ದವು. ದೈತ್ಯಾಕಾರದ ಮರಗಳು, ದೆವ್ವಗಳು ಧರಿಸಿರುವ ದಿರಿಸುಗಳಂತೆ ಬೇರುಗಳನ್ನು ಮತ್ತು ಬಿಳಲುಗಳನ್ನು ಬಿಟ್ಟುಕೊಂಡು ಚಿತ್ರವಿಚಿತ್ರ ಆಕಾರವಾಗಿ ಬೆಳೆದು ನಿಂತಿದ್ದವು. ಹೂತೋಟದ ಮಧ್ಯೆಮಧ್ಯೆ ಅಗಾಧ ಆಕಾರದ ಮರಗಳು, ಸಣ್ಣ ಪ್ರಮಾಣದ ಮರಗಿಡಗಳು ಬೆಳೆದು ನಿಂತಿದ್ದವು. ತೋಟದಲ್ಲಿ ಅಲ್ಲಲ್ಲಿ ಜಿಂಕೆಗಳು ಓಡಾಡುತ್ತಿದ್ದವು. ಒಂದೇ ಸೆಕೆ. ಸುತ್ತಲೂ ಭೋರ್ಗರೆಯುತ್ತಿರುವ ಸಮುದ್ರ ಅಲೆಗಳ ಸದ್ದು ಒಂದೇ ಸಮನೆ ಕೇಳಿಸುತ್ತಿತ್ತು. ಸಮುದ್ರ ತಟಗಳಲ್ಲಿ ಸಾಕಷ್ಟು ತೆಂಗಿನ ಮರಗಳು ಅಂಕುಡೊಂಕಾಗಿ ಮತ್ತು ಬಹಳ ಉದ್ದವಾಗಿ ಬೆಳೆದು ನಿಂತಿದ್ದವು. ಬರೋ ಎಂದು ಬೀಸುತ್ತಿರುವ ಗಾಳಿಗೆ ಅವು ನಿಲ್ಲಲಾರದೇ ಓಲಾಡುತ್ತಿದ್ದವು.

ಕೊನೆಗೆ ಆ ದಿನ ಸಾಯಂಕಾಲ ಸೆಲ್ಯುಲಾರ್ ಜೈಲಿನ ಒಳಗೆ ಕರೆದುಕೊಂಡು ಹೋದರು. ಕ್ರಿ.ಶ.1906ರಲ್ಲಿ ಬ್ರಿಟಿಷರು ಕೈದಿಗಳ ಕೈಗಳಲ್ಲಿ ಕಟ್ಟಿ ಮುಗಿಸಿದ್ದ ಈ ಜೈಲಿನಲ್ಲಿ ದೇಶದ ಮೂಲೆಮೂಲೆಯಿಂದಲೂ ಸ್ವಾತಂತ್ರ್ಯ ಹೋರಾಟಗಾರರನ್ನು ಸೆರೆ ಹಿಡಿದು ತಂದು ಇಲ್ಲಿ ಕೂಡಿ ಹಾಕಿದ್ದರು. ಸುತ್ತಲೂ ಸಮುದ್ರ ಇದ್ದ ಈ ಜೈಲಿನಿಂದ ಯಾರೂ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು 'ಕಾಲಾಪಾನಿ (ಕಪ್ಪು ನೀರು)' ಎಂದೂ ಕರೆಯುತ್ತಿದ್ದರು. ನಕ್ಷತ್ರ ಮೀನಿನ ಆಕಾರದಲ್ಲಿ ಏಳು ರೆಕ್ಕೆಗಳಂತೆ ಮೂರು ಅಂತಸ್ತುಗಳಲ್ಲಿ ಕಟ್ಟಿರುವ ಒಟ್ಟು 696 ಕೊಠಡಿಗಳಿದ್ದು ಇವುಗಳ ತುಂಬಾ ಸ್ವಾತಂತ್ರ್ಯ ಹೋರಾಟಗಾರರನ್ನು ಕೂಡಿ ಹಾಕಿದ್ದರು. ಅದನ್ನು ನೋಡಿದ ನಮಗೆ ಆಶ್ಚರ್ಯ ಮತ್ತು ಖೇದವೂ ಆಗಿತ್ತು. ಬ್ರಿಟಿಷರು ನಮ್ಮ ದೇಶಕ್ಕೆ ಬಂದು ನಮ್ಮ ಜನರನ್ನೇ ಹೇಗೆಲ್ಲ ಶಿಕ್ಷೆಗೆ ಒಳಪಡಿಸಿದ್ದರು ಎಂಬುದನ್ನು ಇಲ್ಲಿ ನೋಡಬಹುದು. ಅಲ್ಲಿಂದ ಹಿಂದಕ್ಕೆ ಹೋಗುವುದರೊಳಗೆ ಕತ್ತಲಾಗಿತ್ತು. ದಿನವೆಲ್ಲ ಸೆಕೆಯಾಗಿದ್ದ ದ್ವೀಪದಲ್ಲಿ ಸಾಯಂಕಾಲವಾಗಿದ್ದೇ ಗಾಳಿ ತಣ್ಣಗೆ ಬೀಸುತ್ತಿತ್ತು. ರಾತ್ರಿ ಒಳ್ಳೆ ವೆಜ್ ಮತ್ತು ನಾನ್‌ವೆಜ್ ಎರಡೂ ರೀತಿಯ ತಿನಿಸುಗಳಿದ್ದು ಚೆನ್ನಾಗಿಯೇ ಊಟ ಮಾಡಿ ಕೋಣೆ ಸೇರಿಕೊಂಡೆವು. ಕೋಣೆಯ ಕಿಟಕಿ ತೆಗೆದಿದ್ದೇ ಸಮುದ್ರದ ಕಡೆಯಿಂದ ಗಾಳಿ ತಣ್ಣಗೆ ಬೀಸುತ್ತಿತ್ತು. ನಾಳೆ ಬೆಳಗ್ಗೆ ಆರು ಗಂಟೆಗೆಲ್ಲ ತಯಾರಾಗಿರುವಂತೆ ಗೈಡ್ ನಮಗೆ ಹೇಳಿ ಹೋಗಿದ್ದರು.

ಸಾವಿತ್ರಿ, ನಾನು ಇಬ್ಬರೇ ಆರಾಮಾಗಿ ಹೋಟೆಲ್ ಕೋಣೆಯಲ್ಲಿ ಬಂಧಿಯಾಗಿದ್ದೆವು. ಕೋಣೆ ಕೂಡ ಚೆನ್ನಾಗಿಯೇ ಇತ್ತು. ಮದುವೆಯಾಗಿ ಕಳೆದ ಹತ್ತು ದಿನಗಳಲ್ಲಿ ಸಿಕ್ಕಸಿಕ್ಕ ಆಹಾರವನ್ನೆಲ್ಲ ತಿಂದು ಇಬ್ಬರೂ ಸಾಕಷ್ಟು ತೂಕವನ್ನು ಹೆಚ್ಚಿಸಿಕೊಂಡಿದ್ದೆವು. ಕೆಳಗೆ ಹೋಟೆಲ್‌ನಲ್ಲಿಟ್ಟಿದ್ದ ತೂಕದ ಯಂತ್ರದಲ್ಲಿ ನೋಡಿಕೊಂಡಾಗ ನನ್ನ ತೂಕ ಎಪ್ಪತ್ತೆರಡು ಕಿಲೋಗ್ರಾಂಗಳಿದ್ದರೆ ಸಾವಿತ್ರಿಯದು ಐವತ್ತೇಳು ಕಿಲೋಗ್ರಾಂ ತೂಕ ಏರಿತ್ತು. ನನ್ನ ತೂಕ ಮೂರು ಕಿಲೋಗ್ರಾಂ ಹೆಚ್ಚಾಗಿತ್ತು. ಸಾವಿತ್ರಿಯ ತೂಕ ಎರಡು ಕಿಲೋಗ್ರಾಂ ಹೆಚ್ಚಾಗಿರುವುದಾಗಿ ಸಾವಿತ್ರಿಯೇ ಹೇಳಿದಳು. ನನ್ನ ಉದ್ದ 5.8 ಅಡಿಗಳಿದ್ದರೆ ಸಾವಿತ್ರಿಯ ಎತ್ತರ 5.5 ಅಡಿಗಳು. ಕಳೆದ ಹತ್ತು ದಿನಗಳೂ ರಾತ್ರಿ ಮಲಗುವಾಗ ಎಲ್ಲರ ಎದುರಿಗೆ ಬಾಗಿಲು ಮುಚ್ಚುವುದು ಹಿಂಸೆಯಾಗುತ್ತಿತ್ತು. ಆದರೆ ಈಗ ಇಲ್ಲಿ ಅಂತಹ ಸಮಸ್ಯೆ ಇರಲಿಲ್ಲ. 'ಸಾವಿ' ಎಂದೆ. 'ಏನು?' ಎಂದಳು. 'ನಿಜವಾಗಿಯೂ ನಮ್ಮ ಹನಿಮೂನ್ ಇವತ್ತು ನಡೆಯುತ್ತೆ' ಎಂದೆ. 'ರೀ ಸುಮ್ಮನೆ ಮಲಗ್ರಿ, ತುಂಬಾ ಟಯರ್ಡ್ ಆಗಿದೆ' ಎಂದುಬಿಟ್ಟಳು. ಅವಳು ಏನೇ ಹೇಳಿದರು, ನಾವು ಯಾರ ಹಂಗೂ ಇಲ್ಲದೆ ಬೆಂಗಳೂರಿನಿಂದ ದೂರದ ಅಂಡಮಾನ್ ದ್ವೀಪ ಸಮೂಹಗಳ ಮಧ್ಯೆ ಪೋರ್ಟ್ ಬ್ಲೇರ್ ದ್ವೀಪದಲ್ಲಿ ಒಂಟಿಯಾಗಿದ್ದೆವು. ಆ ರಾತ್ರಿ ನನ್ನ ಬದುಕಿನಲ್ಲಿ ಮರೆಯಲಾರದ ರಾತ್ರಿಯಾಗಿ ಉಳಿದು ಹೋಗಿತ್ತು. ಮದುವೆ, ಗಂಡ ಹೆಂಡತಿ ಎನ್ನುವುದಕ್ಕೆ ಒಂದು ಅರ್ಥ ಇದೆ ಎನ್ನುವ ಆಲೋಚನೆ ನನ್ನನ್ನು ನಿಧಾನವಾಗಿ ಆವರಿಸಿಕೊಳ್ಳುತ್ತಿತ್ತು.

***

ಮುಂದಿನ ಮೂರು ದಿನಗಳಲ್ಲಿ ಪೋರ್ಟ್ ಬ್ಲೇರ್ ಸುತ್ತಲೂ ಇದ್ದ ದ್ವೀಪಗಳಾದ ಹ್ಯಾವ್ಲಾಕ್, ವೈಪರ್, ಪ್ಲ್ಯಾಟ್ಟೀ, ವಾಂಡೂರ್, ರೆಡ್ಸ್ಕಿನ್ ಇತ್ಯಾದಿ ದ್ವೀಪಗಳನ್ನು ಅವುಗಳ ಸುತ್ತಲಿನ ಅನೇಕ ಕಡಲ ದಂಡೆಗಳನ್ನು ನೋಡಿದೆವು. ಒಂದು ದ್ವೀಪದ ಅಂಚಿನಲ್ಲಿ ನಾನಾ ಬಣ್ಣಬಣ್ಣದ ಹವಳಗಳಿದ್ದ ಕಡೆ ನಾನು ಬಟ್ಟೆ ಬಿಚ್ಚಿ ಸ್ಕೂಬ್ ಡೈಯಿಂಗ್ ಮಾಡಿದೆ. ಸಾವಿತ್ರಿ ಸ್ವಲ್ಪ ದೂರ ಕಡಲ ನೀರಿನಲ್ಲಿ ನಡೆದು ಬಂದು ಹವಳಗಳನ್ನು ನೋಡಿದಳು. ಇನ್ನೂ ಒಂದು ಕಡೆ ದೋಣಿಯ ತಳದಲ್ಲಿದ್ದ ದಪ್ಪದಾದ ಗ್ಲಾಸ್ ಮೂಲಕ ಬಣ್ಣಬಣ್ಣದ ಹವಳಗಳನ್ನು ತೋರಿಸಿದರು. ಎಲ್ಲಿ ನೋಡಿದರೂ ಸಮುದ್ರ. ಕೆಲವು ಸಣ್ಣ ಹಡಗುಗಳಲ್ಲಿ ಕುಳಿತುಕೊಂಡಿದ್ದರೆ ಸಮುದ್ರದ ಮೇಲೆಯೇ ತೇಲುವಂತೆ ಕಾಣಿಸುತ್ತಿತ್ತು. ಕಣ್ಣುಗಳ ತುಂಬಾ ಸಮುದ್ರ ತುಂಬಿ ತುಳುಕಾಡುತ್ತಿತ್ತು. ಇನ್ನು ಸಮುದ್ರದಿಂದ ಹೊರಕ್ಕೆ ಬಂದರೆ ರಾಶಿರಾಶಿ ಮರಗಳು ದಂಡೆಗಳು. ಅಂಡಮಾನ್‌ಗೆ ಬಂದು ಕೆಲವು ಗಂಟೆಗಳಾಯಿತೇನೊ ಎನಿಸುತ್ತಿತ್ತು.

ಮರು ದಿನ ಬೆಳಗ್ಗೆ ಯಥಾಪ್ರಕಾರ ತಯಾರಾಗಿ ತಿಂಡಿ ತಿಂದು ಹೊರಟೆವು. ಯಾಕೊ ಏನೋ ಬೆಳಿಗ್ಗೆ ಎದ್ದಾಗಿನಿಂದಲೇ ಮನಸ್ಸಿನಲ್ಲಿ ಏನೋ ಒಂದು ಅಹಿತಕರ ಪ್ರಕ್ಷುಬ್ಧತೆ ತುಂಬಿಕೊಂಡಿತ್ತು. ಚಾಥಮ್, ಸೆಲ್ಯುಲಾರ್ ಜೈಲಿರುವ ದ್ವೀಪ ಮತ್ತು ವೈಪರ್ ದ್ವೀಪಗಳ ಮಧ್ಯೆ ಉದ್ದವಾದ ಸಮುದ್ರದ ಜಲಸಂಧಿ ಇದೆ. ಎರಡೂ ಕಡೆ ದಟ್ಟಕಾಡುಗಳಿದ್ದು ಆ ಜಲಸಂಧಿಯ ಉದ್ದಕ್ಕೂ ಸಫಾರಿ ಹೋಗುವುದಾಗಿ ಗೈಡ್ ನಮ್ಮನ್ನೆಲ್ಲ ನೂರು ಜನರು ಹಿಡಿಯುವ ಒಂದು ಡೀಸೆಲ್ ದೋಣಿಯಲ್ಲಿ ಕರೆದುಕೊಂಡು ಹೊರಟರು. ಮೊದಲಿಗೆ ಹತ್ತತ್ತು ಜನರನ್ನು ಸಣ್ಣ ಹಾಯಿ ದೋಣಿಗಳಲ್ಲಿ ಕರೆದುಕೊಂಡು ಹೋಗಿ ದೊಡ್ಡ ದೋಣಿಗೆ ಹತ್ತಿಸಿದರು. ಹತ್ತಿದವರೆಲ್ಲ ಮೊದಲು ದೋಣಿಯ ಅಂಚಿನಲ್ಲಿದ್ದ ಮರದ ಬೆಂಚುಗಳ ಮೇಲೆ ಕುಳಿತುಕೊಂಡರು.

**(ಸಶೇಷ)**